2

# ಯೇಸುವಿನ ಕುರಿತು ನಾವು ಹೇಗೆ ಅರಿಯಬಹುದು? (1)

ಯೇಸುವಿನ ಕುರಿತಾದ ಐತಿಹಾಸಿಕ ಪ್ರಶ್ನೆಗಳನ್ನು ಕೇಳುವಾಗ, ದೊರಕಬಹುದಾದ ಮೂಲಗಳ ಮಾಹಿತಿಯನ್ನು ಗಮನಿಸಬೇಕಾಗುತ್ತದೆ. ಪ್ರಾಚೀನ ಬರವಣಿಗೆಗಳಲ್ಲಿ ಆ ವಿಚಾರಗಳನ್ನು ದಾಖಲು ಮಾಡಲಾಗಿರುತ್ತದೆ. ಕ್ರೈಸ್ತರಲ್ಲದವರು ನೀಡಿರುವ ಪುರಾವೆಗಳನ್ನು ಮೊದಲು ಗಮನಿಸೋಣ.

ಪುರಾತನ ಕಾಲದ ಕ್ರೈಸ್ತರಲ್ಲದವರ ದಾಖಲೆಗಳೆಲ್ಲವೂ ಯೇಸುವಿನ ಬಗ್ಗೆ ಮಾತನಾಡುವದಿಲ್ಲ. ಯೇಸು ಈಗಾಗಲೇ ಲೋಕದಲ್ಲಿ ಚಿರಪರಿಚಿತನಾಗಿರುವದರಿಂದ, ಅವರ ದಾಖಲೆಗಳಿಂದ ಆಶ್ಚರ್ಯ ಉಂಟಾಗಬಹುದು. ಆತನು ಜೀವಿಸಿದ ಕಾಲವು ಪೂರ್ಣಗೊಂಡ ನಂತರ, ಬರಹಗಾರರು ಏಕೆ ಈತನ ಕುರಿತು ಗುರುತಿಸಲಿಲ್ಲ? ಯೇಸು ಜೀವಿಸಿದ ಕಾಲದಲ್ಲಿ, ಆತನ ಸೇವೆಯು ನಿರ್ಗಮನವಾಗಿತ್ತು. ಆತನು ರೋಮಾ ಸಾಮ್ರಾಜ್ಯದಲ್ಲಿದ್ದ ಒಂದು ಬಡ ಯೆಹೂದ್ಯ ಕುಟುಂಬದಲ್ಲಿ ಜನಿಸಿದನು. ಆತನು ತನ್ನ ದೇಶವನ್ನು ಬಿಟ್ಟು ಹೊರಗಡೆ ಹೋಗಲಿಲ್ಲ ಎಂಬ ಮಾಹಿತಿಯು ನಮ್ಮಲ್ಲಿ ಲಭ್ಯವಿದೆ, ಆದರೆ ಆತನು ಶಿಶುವಾಗಿರುವಾಗ, ಹೆರೋದನ ಭಯದ ನಿಮಿತ್ತ ಆತನ ತಂದೆ ತಾಯಿಗಳು ಅಲ್ಪಕಾಲ ಐಗುಪ್ತ ದೇಶಕ್ಕೆ ಹೋಗಿದ್ದರು (ಮತ್ತಾಯ 2:13-15). ಆತನ ಮರಣದ ಕುರಿತು, ಆತನ ಜೀವಿತ ಕಾಲದಲ್ಲಿ ವಾಸಿಸಿದ್ದ ಯೆಹೂದ್ಯರು ಗೊಂದಲಕ್ಕೊಳಗಾಗಿದ್ದರು. ಆದ್ದರಿಂದ ಪುರಾತನ ಬರಹಗಾರರು ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಇದು ಆಶ್ಚರ್ಯಕರವಾದದ್ದೇ!

ಇಲ್ಲಿ ಎರಡು ಗುಂಪನ್ನು ಗಮನಿಸುತ್ತೇವೆ: (ಕ್ರೈಸ್ತರೂ ಅಲ್ಲ ಯೆಹೂದ್ಯರೂ ಅಲ್ಲ) ಅಂದರೆ ಬರಹಗಾರರು ಮತ್ತು ಯೆಹೂದ್ಯ ಬರಹಗಾರರು ಒಳಗೊಂಡಿರುವರು.

## ಯೇಸುವಿನ ಕುರಿತಾಗಿ, ಅನ್ಯರಿಂದ ದೊರಕಬಹುದಾದ ಮಾಹಿತಿ

ಕ್ರಿಸ್ತ ಶಕ, ಎರಡನೇ ಶತಮಾನದ ಆರಂಭದಲ್ಲಿ ಟಾಸಿಟಸ್ ಎಂಬ ರೋಮಾಯದ ಚರಿತ್ರಾಕಾರನಿದ್ದನು. 115ನೇ ವರ್ಷದಲ್ಲಿ, ರೋಮಾಯದ ಒಂದು ಬಹುದೊಡ್ಡ ಬೆಂಕಿಯ ಬಗ್ಗೆ ಬರೆದನು. ಕ್ರಿ.ಶ 64ರಲ್ಲಿ ನೀರೋ ಚಕ್ರವರ್ತಿಯು ಅವನಿಗೆ ಅಪ್ಪಣೆಯನ್ನು ನೀಡಿದ್ದನು:

> ಮನುಷ್ಯನ ಸಕಲ ಪ್ರಯತ್ನಗಳಾಗಲೀ ಅವನ ಐಶ್ವರ್ಯವುಳ್ಳ ಬಹುಮಾನಗಳಾಗಲೀ ಅರಸನ ಆಜ್ಞೆಗಳನ್ನು ತಡೆಯಲು ಅಸಾಧ್ಯವಾಯಿತು. ಕ್ರೈಸ್ತರ ಕುರಿತು ಜಿಗುಪ್ಸೆ ಉಂಟಾಗಿ, ನೀರೋ ಚಕ್ರವರ್ತಿಯು ಕ್ರೂರವಾದ ಶಿಕ್ಷೆಯನ್ನು ಉಂಟುಮಾಡಿದನು. ಕ್ರೈಸ್ತರು ಎಂಬ ಹೆಸರಿನ ಮೂಲದಿಂದ ಉಂಟಾದ ಕ್ರಿಸ್ತನು ಎಂಬಾತನು ತಿಬೇರಿಯನ ಆಡಳಿತ ಕಾಲದ, ಪೊಂತಿ ಪಿಲಾತನಿಂದ ತೀವ್ರವಾದ ಶಿಕ್ಷೆಯನ್ನು ಅನುಭವಿಸಿದನು, ಅದು ತೀವ್ರವಾದ ಮೂಢನಂಬಿಕೆಯಾಗಿ, ಯುದಾಯದಲ್ಲೂ ರೋಮಾಯದಲ್ಲೂ ಸಕಲ ಕೆಟ್ಟತನಗಳ ಮೂಲವಾಗಿ, ಅದು ಸಕಲ ಸ್ಥಳಗಳಿಗೂ ಹಬ್ಬಿಕೊಂಡಿತು. ಅದರ ಪ್ರಕಾರ ಅಪರಾಧಿಗಳಿಗೆ ಕ್ರೂರ ಶಿಕ್ಷೆಯಾಯಿತು...[1]

ಟಾಸಿಕಸನು ಕ್ರೈಸ್ತರ ಪರ ಇಲ್ಲದೆ ಇದ್ದದರಿಂದ, ಅವನು ಯೇಸುವಿನ ಅನುಯಾಯಿಗಳಿಗೆ ಸಹಾಯಿಸುವದು ಅಸಾಧ್ಯವಾಗಿತ್ತು. ಅದಾಗ್ಯೂ ಅವನು ಹೊಸ ಒಡಂಬಡಿಕೆಗೆ

ಅನುಗುಣವಾದ ಕೆಲವು ಹೇಳಿಕೆಗಳನ್ನು ನೀಡಿರುವನು: ಆತನನ್ನು "ಕ್ರಿಸ್ತಸ್" ಎಂದು ಕರೆದಿರುವರು (ಲಾತೀನನ "ಕ್ರಿಸ್ತನು"), ತಿಬೇರಿಯಸನ ಕಾಲದಲ್ಲಿ ಆತನನ್ನು ಕೊಂದರು (ನೋಡಿರಿ ಲೂಕ 3:1), ಆತನನ್ನು ಕೊಂದವನು ಪೊಂತಿ ಪಿಲಾತನೇ, ಅವನು ಯುದಾಯದ ಅಧಿಕಾರಿಯಾಗಿದ್ದನು ಎಂದು ಹೊಸ ಒಡಂಬಡಿಕೆ ತಿಳಿಸುತ್ತದೆ.

ಮೊದಲನೆ ಶತಮಾನದ ಆರಂಭದಲ್ಲಿ ಹಾಗೂ ಎರಡನೇ ಶತಮಾನದ ಆದಿಯಲ್ಲಿ ಸ್ಯೂಟೋನಿಯಸ್ ಎಂಬ ಮತ್ತೊಬ್ಬ ರೋಮಾಯದ ಇತಿಹಾಸಕಾರನು ಸಹ ಇದ್ದನು. ಅವನು ಯೇಸುವಿನ ಬಗ್ಗೆ ಹೆಚ್ಚು ತಿಳಿಸದಿದ್ದರೂ, ಕ್ರಿ.ಶ. 49ರಲ್ಲಿ ಚಕ್ರವರ್ತಿಯಾದ ಕ್ಲಾಡಿಯಸನು ಆತನ ಕುರಿತು ತನ್ನ ಬರಹದಲ್ಲಿ: ಯೆಹೂದ್ಯರು ಕ್ರಿಸ್ತನ ಕುರಿತಾಗಿ ಅತಿಯಾದ ಧೋರಣೆಯನ್ನು *(ಕ್ಲಾಡಿಯಸ್)* ಹೊಂದಿದ್ದರಿಂದ ಅವರನ್ನು ರೋಮಾಯ ದಿಂದ ಹೊರಹಾಕಿದನು,[2] *ಕ್ರಿಸ್ಟಸ್* ಎಂಬದು ಗ್ರೀಕ್‌ನಲ್ಲಿ "ಕ್ರಿಸ್ತನು" ಅಂದರೆ, ಪ್ರೀತಿಯ ಕರುಣೆಯ ಸಹಜವಾಗಿ ಯೇಸು ಎಂಬುದರ ಬದಲು "ಕ್ರಿಸ್ತನು" ಎಂಬ ಗೊಂದಲವಾಗಿದೆ (*ಕ್ರಿಸ್ಟಸ್* - ಅಂದರೆ ಇಬ್ರಿಯ ಭಾಷೆಯಲ್ಲಿ ಮೆಶಿಯಾಕ್ ಅಭಿಷೇಕ ಹೊಂದಿದ ಮೆಸ್ಸೀಯ) ಅದರ ಬಗ್ಗೆ ಸ್ಪಷ್ಟತೆ ಇಲ್ಲದೆ ಇದ್ದರೂ, ಸ್ಯೂಟೋನಿಯಸ್‌ನು ರೋಮಾಯದ ಯೆಹೂದ್ಯರ ಹಾಗೂ ಯೆಹೂದ್ಯರಾದ ಕ್ರೈಸ್ತನ ನಡುವಿನ ಘರ್ಷಣೆಯ ಬಗ್ಗೆ ತಿಳಿಸುತ್ತಿರುವನು. ಅದು ಕ್ರಿಸ್ತನ ನಿಮಿತ್ತವಾಗಿಯೇ ಉಂಟಾಯಿತು ಎಂದು ಅವನು ಸಂದೇಹಿಸಿದ್ದನು. ಯೆಹೂದ್ಯರ ಅಂತರಿಕ ದ್ವಂದ್ವಗಳ ಬಗ್ಗೆ ರೋಮಾಯರು ಹೆಚ್ಚು ಗಮನ ನೀಡಲಿಲ್ಲ ಅನೇಕ ಸಾರಿ ಅವರು ಅಪಾರ್ಥ ಮಾಡಿಕೊಂಡರು (ನೋಡಿರಿ ಅಪೊಸ್ತಲರ ಕೃತ್ಯಗಳು 23:26-30; 25:13-22). ಸ್ಯೂಟೋನಿಯನಿಗೆ ಯೇಸುವಿನ ಕುರಿತು ಹೆಚ್ಚು ಮಾಹಿತಿ ಇಲ್ಲದಿದ್ದರೂ, ಯೇಸುವಿನ ಕುರಿತ ಮಾಹಿತಿಯ ತುಣಕನ್ನು ನೀಡಿರುವನು.

ಅನ್ಯರಿಂದ ದೊರಕಿರುವ ಇನ್ನೊಂದು ಮಾಹಿತಿಯು ಆಸಕ್ತಿಕರವಾಗಿದೆ. ಕ್ರಿ.ಶ. 112ರಲ್ಲಿ, ಪ್ಲಿನಿ, ಎಂಬ ಬಿಥಾನ್ಯದ ರೋಮ ಅಧಿಕಾರಿಯು ಕ್ರೈಸ್ತರಾದ ಜನರನ್ನು ಹೇಗೆ ನಡೆಸಿಕೊಳ್ಳ ಬೇಕೆಂಬ ವಿಚಾರದ ಕುರಿತು ಚಕ್ರವರ್ತಿಯಾದ ಟ್ರಾಜಾನ್‌ಗೆ ಪತ್ರವನ್ನು ಬರೆದನು. (ಈ ಕಾಲದಲ್ಲಿ ಕ್ರೈಸ್ತತ್ವವು ನಿಯಮ ಬಾಹಿರವಾದ ಧರ್ಮವಾಗಿತ್ತು ಏಕೆಂದರೆ, ಚಕ್ರವರ್ತಿಯ ಪ್ರತಿಮೆಗೆ ಅವರು ಯಜ್ಞವನ್ನು ಸಮರ್ಪಿಸುತ್ತಿರಲಿಲ್ಲ.) ಈಗ ಅವರನ್ನು ಹಾಗೆಯೇ ಶಿಕ್ಷಿಸ ಬೇಕಿತ್ತೋ ಅಥವಾ ಅವರಲ್ಲಿ ತಪ್ಪು ಕಂಡು ಬಂದಾಗ ಅವರನ್ನು ತನ್ನ ಬಳಿಗೆ ಎಳೆತಂದಾಗ ಶಿಕ್ಷಿಸಬೇಕಿತ್ತೋ? ಇದಕ್ಕೆ ಟ್ರಾಜಾನನ ಪ್ರತಿಕ್ರಿಯೆ ಏನೆಂದರೆ, ಅವರಲ್ಲಿ ತಪ್ಪು ಕಂಡಾಗ ಶಿಕ್ಷಿಸಬೇಕು ಎಂಬ ಉತ್ತರವನ್ನು ಪ್ಲಿನಿಗೆ ನೀಡಲಾಯಿತು. ಕ್ರೈಸ್ತರ ಆರಾಧನೆ ಕೂಟದ ಕುರಿತು ಪ್ಲಿನಿಯ ಪತ್ರಗಳ ಒಂದು ಸಾರಾಂಶ ಈ ಕೆಳಕಂಡತಿದೆ,

> … ಅವರು ನಸುಕಿನಲ್ಲಿಯೇ ಕೂಟಗಳಿಗೆ ಸೇರುವ ಹವ್ಯಾಸ ಮಾಡಿಕೊಂಡಿದ್ದರು. ದೇವರಿಗಾಗಿ ಹಾಡುವ ಸಂಗಿತಗಳಲ್ಲಿ, ಕ್ರಿಸ್ತನಿಗಾಗಿ ಚರಣ ಬಿಟ್ಟು ಚರಣವನ್ನು ಹಾಡಿದರು. ಕೆಟ್ಟತನವನ್ನಾಗಲೀ, ತಪ್ಪುಗಳನ್ನಾಗಲೀ, ಅಥವಾ ವ್ಯಭಿಚಾರವನ್ನಾಗಲೀ, ಮಾತಿಗೆ ತಪ್ಪುವ ವಿಚಾರವನ್ನಾಗಲೀ, ಮಾಡುವದಿಲ್ಲ ಎಂಬ ಶಪಥವನ್ನು ಮಾಡಿ ಯಥಾರ್ಥರಾಗಿರುವಂತೆಯೂ, ಸಾಧಾರಣವಾದ ಊಟವನ್ನು ಮಾಡುವೆವೆಂದು ಮಾತು ನೀಡಿದ್ದರು. ನಾನು ಈ ಪತ್ರವನ್ನು ನಿಮಗೆ ಬರೆಯುವಾಗ ಅವರು ಈ ರೀತಿಯಾಗಿ ಸೇರಿ ಬರುವದನ್ನು ನಿಷೇಧ ಮಾಡಿದ್ದರು, ನಿಮ್ಮ ಅಪ್ಪಣೆಯ ಮೇರೆಗೆ, ಅವರೊಂದಿಗಿನ ರಾಜಕೀಯ ಸಂಬಂಧವನ್ನು ತೊಡೆದುಹಾಕಿದ್ದೆನು.[3]

ಪ್ಲಿನಿಯು "ಕ್ರಿಸ್ತನ" ಹೆಸರಿಸಿ ಬರೆದಿದ್ದನು ಪ್ರಥಮ ಹಂತದಲ್ಲಿಯೇ ಕ್ರೈಸ್ತರು ಆತನನ್ನು ಆರಾಧಿಸಿದರು ಎಂದು ತಿಳುಕೊಂಡಿದ್ದನು. ಯೇಸುವನ್ನು ಜನರು ತಡವಾಗಿ ಅರಿಯದೆ, ಆರಂಭದಲ್ಲಿಯೇ ಆತನನ್ನು ದೇವರೆಂದು ಪರಿಗಣಿಸಿದ್ದರು. ಮೊದಲ ಶತಮಾನದ ಕ್ರೈಸ್ತರು

ಕ್ರಿಸ್ತನಿಗೆ ತಮ್ಮ ಜೀವಿತವನ್ನು ಸಮರ್ಪಿಸಿ, ಮಹತ್ವದ ನೈತಿಕ ಜೀವಿತವನ್ನು ಜೀವಿಸಿದರು. ಇದೊಂದೆ ಸ್ಥಳದಲ್ಲಿ ಪ್ಲಿನಿಯು ಕ್ರಿಸ್ತನ ಹೆಸರನ್ನು ದಾಖಲಿಸದೆ, ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಕೆಲವು ಜನರು ಕ್ರಿಸ್ತನ ನಾಮವನ್ನು ಶಪಿಸಿದರು ಎಂದು ಸಹ ತಿಳಿಸಿರುವನು.

ಸಮೋಸತದ ಸೆಲೆಸಸ್ ಮತ್ತು ಲೂಸಿಯಸ್ ಎಂಬ ಅನ್ಯ ಬರಹಗಾರು ಕ್ರೈಸ್ತರಿಗಾಗಲೀ ಅಥವಾ ಯೇಸುವಿಗಾಗಲೀ ಹೆಚ್ಚು ಗೌರವ ನೀಡಿರುವದಿಲ್ಲ. ಸೆಲೆಸಸ್‌ನ *"ವರ್ಕ್ ಟ್ರೂ ಡಿಸ್‌ಕೋರ್ಸ್"* (ಕ್ರಿ.ಶ. 177-78). ಈ ಬರವಣಿಗೆಯ ಮೂಲವನ್ನು ಮೂರನೇ ಶತಮಾನದ ಕ್ರೈಸ್ತ ಪರವಾಗಿ ಮಾಡುವವನಿಂದ ತಿಳಿಯುತ್ತೇವೆ. ಅರಿಜನ್‌ನ ಪ್ರಕಾರ, ಯೆಹೂದ್ಯರ ಮತ್ತು ಯೇಸುವಿನ ನಡುವೆ ನಡೆದ ಮಾತು ಕತೆಯ, ಅಂದರೆ ಯೆಹೂದ್ಯರು; ಯೇಸುವಿನ ಕನ್ಯಾಗರ್ಭವನ್ನು (ಮತ್ತಾಯ ಹಾಗೂ ಮಾರ್ಕನ ಪ್ರಕಾರದ) ನಂಬದೆ ಮರಿಯಳು "ಪನ್‌ತೇರ" ಎಂಬ ಒಬ್ಬ ಸೈನಿಕನಿಂದ ಗರ್ಭವತಿಯಾಗಿದ್ದಳು ಎಂದು ಪ್ರತಿವಾದಿಸಿದ್ದರು. ಗ್ರೀಕ್ ಭಾಷೆಯಲ್ಲಿ "ಕನ್ಯೆ" ಅಂದರೆ *(ಪರಂತೋಸ್)* ಎಂಬ ಅರ್ಥ. ಯೇಸು ಐಗುಪ್ತ ದೇಶಕ್ಕೆ ಭೇಟಿ ನೀಡಿ, ಅಲ್ಲಿ ಮಂತ್ರವನ್ನು ಕಲಿತು ಪಾಲಿಸ್ತೇನಿಗೆ ಹಿಂದಿರುಗಿ, ತಾನೇ ದೇವರು ಎಂದು ಪ್ರಕಟಿಸಿದನು ಎಂದು ಸೆಲೆಸಸನು ತಿಳಿಸಿರುವನು.

ಕ್ರಿ.ಶ. 115-200 ರಲ್ಲಿ ಕ್ರೈಸ್ತರು ಯೇಸುವನ್ನು ದೇವರೆಂದು ಗೌರವಿಸಿದರು, ಮತ್ತು ಆತನು ಒಂದು ಹೊಸ ಪಂಗಡವನ್ನು ಪರಿಚಯಿಸಿದ ನಿಮಿತ್ತ ಕ್ರೂಜೆಗೆ ಹಾಕಲ್ಪಟ್ಟನು ಎಂದು,[4] ಲೂಸಿಯನ್ನನು ತಿಳಿಸಿರುವನು. ಕ್ರೂಜೆತನಾದವನು ಯೇಸುವೇಎಂಬ ಲೂಸಿಯಾನ ಯೋಚನೆಯಲ್ಲಿ ಸಂದೇಹವಿದೆ. ಸೆಲಸಸನಾಗಲಿ ಅಥವಾ ಲೂಸಿಯಾನನಾಗಲಿ ಯೇಸುವಿನ ಅಥವಾ ಕ್ರೈಸ್ತರ ಬಗ್ಗೆಯಾಗಲೀ ಆಸಕ್ತಿ ತೋರದೆ ಇದ್ದರೂ, ಆತನು ಜೀವಿಸಿದ್ದನು ಎಂಬುದಕ್ಕೆ ಅವರ ಬರವಣಿಗೆಗಳು ಸಾಕ್ಷಿಯಾಗಿವೆ. ಆತನು ಕನ್ಯೆಯಲ್ಲಿ ಹುಟ್ಟಿದವನು, ಆತನು ಕ್ರೂಜಿನಾಗಿದ್ದನು ಎಂಬುದಕ್ಕೂ ಸಾಕ್ಷಿ ಯಾಗಿವೆ.

## ಯೇಸುವಿನ ಕುರಿತು ಯೆಹೂದ್ಯರಿಂದ ದೊರೆಯುವ ಉತ್ತರಗಳು

ಕ್ರಿ.ಶ. ಮೊದಲ ಶತಮಾನದ ಅಂತ್ಯದಲ್ಲಿ ಜೊಸೆಫಸನು ಎಂಬ ಯೆಹೂದ್ಯರ ಪುರಾತನ ಬರವಣಿಗೆಗಾರನು ಹಾಗೂ ಇತಿಹಾಸಕಾರನು ಪ್ರಮುಖನಾಗಿರುವನು. ಯೋಸೆಫಸನು ಯೆಹೂದ್ಯರ ಚರಿತ್ರೆಯನ್ನು ಕೂಲಂಕುಶವಾಗಿ ಬರೆದಿರುವನು, ಹೊಸ ಒಡಂಬಡಿಕೆಯ ಸಂಗಡ, ಅವರ ಬರವಣಿಗೆಯು ಸಹ ಯೇಸುವಿನ ಕಾಲದ ಯೆಹೂದ್ಯರ ಚರಿತ್ರೆಗೆ ಗ್ರಾಸವನ್ನು ನೀಡುತ್ತವೆ. ಅವನ *Antiquities of the Jews* ಎಂಬ ಇಪ್ಪತ್ತು ಪುಸ್ತಕಗಳ ಸಮೂಹದಲ್ಲಿ, ಕ್ರಿ.ಶ. 93-94ರಲ್ಲಿ ಮಹಾಯಾಜಕನಾದ (ಅನ್ನನ) ಕುರಿತು ಬರೆದಿರುವನು:

> ಅವನು ಸನೆಡ್ರಿನಿನ ನ್ಯಾಯಾಧಿಪತಿಗಳನ್ನು ಒಗ್ಗೂಡಿಸಿ, ಅವರ ಮುಂದೆ ಯಕೋಬನ ಸಹೋದರನಾದ ಕ್ರಿಸ್ತನನ್ನು ತಂದನು, ಆತನ ಸಂಗಡ ಇತರರನ್ನು ಕರತಂದನು, ಅವರು ನಿಯಮಗಳನ್ನು ಮೀರಿದ್ದರಿಂದ ಅವರನ್ನು ಕಲ್ಲೆಸದು ಕೊಲ್ಲುವ ಶಿಕ್ಷೆಗೆ ಒಳಪಡಿಸಿದನು.[5]

ಯೋಸೇಫಸನು ಯೇಸುವಿನ ಹಾಗೂ "ಕ್ರಿಸ್ತನ" ಹೆಸರನ್ನು ಅರಿತ್ತಿದ್ದನು (ಮೆಸ್ಸೀಯ). ಹೊಸ ಒಡಂಬಡಿಕೆಯ ಮಾಹಿತಿಯಂತೆ, ಯೇಸು, ಯಾಕೋಬನೆಂಬ ಒಬ್ಬ ಸಹೋದರನನ್ನು ಹೊಂದಿದ್ದನು (ಮತ್ತಾಯ 13:55; ಗಲಾತ್ಯ 1:19).

ಯೇಸುವಿನ ಕುರಿತಾಗಿ, ಯೋಸೇಫಸನು ಎರಡನೆಯ ಹೇಳಿಕೆಯನ್ನು ನೀಡಿರುವದು, ಗೊಂದಲಮಯವಾಗಿದೆ:

> ಈ ಕಾಲದಲ್ಲಿ ಯೇಸುವೆಂಬ ಜ್ಞಾನಿಯಾದ ಒಬ್ಬ ವ್ಯಕ್ತಿ ಇದ್ದನು. ಆತನು ಅದ್ಭುತವಾದ

ಬೋಧನೆಗಳನ್ನು ಮಾಡಿದ್ದರಿಂದ, ಜನರು ಆತನ ಸತ್ಯಗಳನ್ನು ಅಂಗೀಕರಿಸಿದರು. ಆತನು ಅನೇಕ ಯೆಹೂದ್ಯರನ್ನು ಹಾಗೂ ಗ್ರೀಕರನ್ನು ಸಂಪಾದಿಸಿಕೊಂಡನು. ಮನುಷ್ಯರಿಂದ ದೂಷಣೆಗೆ ಒಳಗಾದ ಯೇಸುವನ್ನು ಮಹಾ ಅಧಿಕಾರಿಯಾದ ಪಿಲಾತನು ಸಹ ಆತನನ್ನು ದೂಷಿಸಿ ಶಿಲುಬೆಗೆ ಒಪ್ಪಿಸಿದನು. ಆತನನ್ನು ಮೊದಲು ಪ್ರೀತಿಸಿದವರು ಆತನನ್ನು ಬಿಟ್ಟು ಹೋಗಲಿಲ್ಲ ಮೂರನೆಯ ದಿನ ಆತನು ಅವರಿಗೆ ಕಾಣಿಸಿಕೊಂಡು, *ಅವರಿಗೆ ಪುನರ್ಜೀವ ನೀಡಿದನು. ಈತನ ಕುರಿತಾಗಿ ಅನೇಕ ಪ್ರವಾದಿಗಳು ಮುಂದಾಗಿಯೇ ಪ್ರವಾದನೆ ನೀಡಿದ್ದರು.* ಆತನ ನಂತರದಲ್ಲಿ ಕ್ರೈಸ್ತರು ಎಂದು ಕರೆಸಿಕೊಂಡ ಜನಾಂಗದವರು ಬದುಕಿ ಉಳಿದಿರುವರು.[6]

ಮರಣದಿಂದ ಎದ್ದುಬಂದ ಕ್ರಿಸ್ತನು ಯೆಹೂದ್ಯರ ಅರಸನು, ಮತ್ತು ಮನುಷ್ಯನಿಗಿಂತ ದೊಡ್ಡವನು ತಾನು ಕ್ರೈಸ್ತನಲ್ಲದ್ದರಿಂದ ಬಹುಶಃ ಅದನ್ನು ನಂಬದೆ ಇರಬಹುದು. ಆದರೆ ಅವನು ಯೇಸುವಿನ ಕುರಿತಾದ ನ್ಯಾಯವಾದ ಹೇಳಿಕೆಯನ್ನು ನೀಡಿರುವನು, ಇದನ್ನು ಕ್ರೈಸ್ತ ಬರಹಗಾರರು ಮುಂದುವರೆಸಿರುವರು. ಆ ವ್ಯಾಖ್ಯಾನವನ್ನು ಪುನಃ ಓದು, ಕ್ರೈಸ್ತ ಭಾಗವನ್ನು ಬಿಡಬಹುದು, ನಂತರದಲ್ಲಿ ಯೋಸೇಫಸನ ನಿಖರವಾದ ಪ್ರತಿವಾದವನ್ನು ಗಮನಿಸಬಹುದು: ಪ್ರಮುಖವಾದ ಸಂಗತಿ ಏನೆಂದರೆ, ನಂಬದವನಾದ ಯೋಸೇಫಸನು ಯೇಸುವಿನ ಕುರಿತಾಗಿ ಬರೆದಿರುವ ಅನೇಕ ಸಂಗತಿಗಳು ಸುವಾರ್ತೆಗಳಿಗನುಗುಣವಾಗಿರುತ್ತವೆ (ಲೂಕ 18:18), ಆತನು ಉಪದೇಶಕನಾಗಿದ್ದನು (ಯೋಹಾನ 12:20, 21), ಅನ್ಯರ ಹಾಗೂ ಯೆಹೂದ್ಯರ ಜನರನ್ನು ತನ್ನ ಬಳಿಗೆ ಸೆಳಕೊಂಡನು (ಮತ್ತಾಯ 27:1, 2). ಆತನು ಶಿಲುಬೆಗೆ ಹಾಕಲ್ಪಟ್ಟನು (ಮತ್ತಾಯ 27; ಮಾರ್ಕ 15; ಲೂಕ 23; ಯೋಹಾನ 19). ಯೇಸುವಿನ ಅನುಯಾಯಿಗಳು ಬಹಳ ಪ್ರಸಿದ್ಧಿಪಡೆದಿದ್ದರು, ಯುದಾಯದಲ್ಲಿ ಅವರು ಕ್ರೈಸ್ತರೆನಿಸಿಕೊಂಡಿದ್ದರು (ಅಪೊಸ್ತಲರ ಕೃತ್ಯಗಳು 11:26; 1 ಪೇತ್ರ 4:16). ಅದು ಈ ಮಾಹಿತಿಯ ಸ್ವಾಸ್ತ್ಯವಾಗಿದೆ.

ಯೇಸುವಿನ ಕುರಿತಾದ ಯೋಸೇಫಸನ ಬರವಣಿಗೆಯು ಇನ್ನು ಆಸಕ್ತಿಕರ ವಾಗಿದೆ. ಅವನು ಸ್ನಾನಿಕನಾದ ಯೋಹಾನನ ಕುರಿತು ವಿಸ್ತಾರವಾಗಿ ಬರೆದಿರುವನು ಅವನು ಯೆಹೂದ್ಯರು ನೀತಿಯ ಜೀವಿತವನ್ನು ನ್ಯಾಯಯುತವಾದ ಜೀವಿತವನ್ನು ಕರುಣೆಯನ್ನು ಮತ್ತು ದೀಕ್ಷಾಸ್ನಾನವನ್ನು ಅಭ್ಯಾಸ ಮಾಡಬೇಕೆಂದು ಉತ್ತೇಜನ ನೀಡಿದನು.[7] ಯೋಹಾನನು ಜನರಲ್ಲಿ ಪ್ರಭಾವಿತನಾದ್ದರಿಂದ, ಹೆರೋದ ಅಂತಿಪನು ಅವನನ್ನು ದ್ವೇಷಿಸಿ (ನೋಡಿರಿ ಮಾರ್ಕ 6:19, 20), ಅವನನ್ನು ಸೆರೆಮನೆಗೆ ಹಾಕಿಸಿ, ಕೊಂದುಹಾಕಿದನು.

ತಾಲ್‌ಮಂದ್ ಎಂಬ ಇನ್ನೊಂದು ಯೆಹೂದ್ಯರ ಗ್ರಂಥವು ಮತ್ತೊಂದು ಪ್ರಮುಖ ಮೂಲವಾಗಿದೆ. ಐದು ಅಥವಾ ಆರನೆಯ ಶತಮಾನದ ದಿನದಲ್ಲಿ ಈ ಬರವಣಿಗೆಯಾಗಿದೆ. ಕ್ರಿ.ಶ. ಒಂದರಲ್ಲಿ ಹಿಂದೆಯೇ ರಬ್ಬಿಗಳ ಬರವಣಿಗೆಯನ್ನು ಅದು ಒಳಗೊಂಡಿದ್ದರೂ, ಅವುಗಳಲ್ಲಿ ಅನೇಕ ಹೇಳಿಕೆಗಳಿವೆ. ಯೇಸು, ಮಹತ್ಕಾರ್ಯಗಳ ವ್ಯಕ್ತಿಯೆಂದು ಅನೇಕ ಹೇಳಿಕೆಗಳಿದ್ದರೂ, ಕೆಲವರು ಆತನನ್ನು ಮಂತ್ರವಾದಿ ಎಂದು ಕರೆದಿರುವರು. ತಾಲಮದ್ ಅನೇಕ ಹೇಳಿಕೆಗಳಲ್ಲಿ ಆತನ ಇರುವಿಕೆ ಹಾಗೂ ಮಹತ್ಕಾರ್ಯಗಳ ವಿಚಾರಗಳನ್ನು ತಳ್ಳಿ ಹಾಕಿರುವದಿಲ್ಲ, ಆದರೆ ಆತನ ಶಕ್ತಿಗೆ ದೇವರೇ ಕಾರಣ ಎಂಬುದನ್ನು ತಳ್ಳಿಹಾಕಲಾಗಿದೆ (ನೋಡಿರಿ ಮಾರ್ಕ 3:22).

## ಈ ಮೂಲಗಳ ಕುರಿತಾದ ಸಮಾಪ್ತಿ

ಅನ್ಯರಿಂದ ಹಾಗೂ ಯೆಹೂದ್ಯರಿಂದ, ಯೇಸುವಿನ ಕುರಿತಾಗಿ ದೊರೆತಿರುವ ಮೂಲಗಳ ನಿರ್ಣಯಗಳನ್ನು ಹೇಗೆ ಸಮಾಪ್ತಿ ಮಾಡಬಹುದು?

(1) *ಆತನು ನಿಜವಾಗಲೂ ಜೀವಿಸಿದ್ದನು ಎಂಬದನ್ನು ದೃಢಪಡಿಸುತ್ತವೆ.* ರೋಮಾಯ ಹಾಗೂ ಯೆಹೂದ್ಯರ ಪ್ರಕಾರವಾಗಿ ಯೇಸು ಖಂಡಿತವಾಗಿ ಜೀವಿಸಿದ್ದನು. ಆದರೆ ಯೇಸು ಜೀವಿಸಿರಲಿಲ್ಲ ಎಂಬ ಸುದ್ದಿಯನ್ನು ಆಗಾಗ್ಗೆ ಕೇಳುತ್ತಿರುತ್ತೇವೆ. ಆತನು ಚರಿತ್ರೆಯಲ್ಲಿ ಇಲ್ಲದ

ವ್ಯಕ್ತಿಯೆಂದು ಅವರು ಹೇಳುತ್ತಾರೆ. ಇಂಥವು ಸಾಕ್ಷ್ಯಾಧಾರಗಳನ್ನು ಅಲಕ್ಷ ಮಾಡಿರಬಹುದು ಅಥವಾ ಅದನ್ನು ಯಥಾರ್ಥವಾಗಿ ಅಂಗೀಕರಿಸದೆ ಇರಬಹುದು.

(2) *ಸುವಾರ್ತೆಗಳು ತಿಳಿಸಿರುವ ಮೂಲ ಪಾಠಗಳನ್ನು ಈ ಸಾಕ್ಷಿಗಳು ದೃಢೀಕರಿಸುತ್ತವೆ.* ಮೊದಲನೇಯ ಕ್ರಿ.ಶ. ದಲ್ಲಿ ಆತನು ಜೀವಿಸಿದ್ದನು ಎಂದು ಸಾಬೀತು ಪಡಿಸುತ್ತವೆ, ಆತನು ಯಾಕೋಬನ ಸಹೋದರನೆಂದು, ಯೆಹೂದ್ಯ ನಾಯಕರು ಆತನ ಮರಣವನ್ನು ಬಯಸಿದರೆಂದು ಪಿಲಾತನ ಆಡಳಿತಾವಧಿಯಲ್ಲಿ, ರೋಮಾಯರು ಆತನನ್ನು ಶಿಲುಬೆಗೆ ಹಾಕಿದರೆಂದು ಆ ಸಾಕ್ಷಿಗಳು ಸಾಬೀತುಪಡಿಸುತ್ತೇವೆ. ನಂತರದಲ್ಲಿ ಆತನು ಉಪದೇಶಕನಾಗಿದ್ದನೆಂದು, ಆತನ ಸೇವೆಯು ಅದ್ಭುತದಿಂದ ಕೂಡಿತ್ತೆಂದು ತನ್ನ ಅನುಯಾಯಿಗಳಿಗೆ ಮೆಸ್ಸೀಯನೆಂದು, ಅವರ ಆರಾಧನೆಯ ದೈವವೆಂದು, ಆತನ ಅನುಯಾಯಿಗಳು ಕ್ರೈಸ್ತರೆಂದು ಕರೆಯಲ್ಪಡಲಾಯಿತು. ಹೊಸ ಒಡಂಬಡಿಕೆಯಲ್ಲಿ ದಾಖಲಾಗದ ಯಾವುದೇ ಸಾಕ್ಷ್ಯಾಧಾರಗಳನ್ನು ಆ ಮೂಲಗಳು ತಿಳಿಸುವದಿಲ್ಲ, ಈ ಸಾಕ್ಷ್ಯಾಧಾರಗಳು ಮಾಹಿತಿಯ ಪ್ರಮುಖ ಅಂಶಗಳಾಗಿವೆ, ಅವುಗಳು ಕ್ರೈಸ್ತರಿಗೆ ಪರವಾಗಿಯೇ ಇರುತ್ತವೆ.

---

ಟಿಪ್ಪಣೆಗಳು

[1]Tacitus *Annals* 15.44.2-8. [2]Suetonius *Claudius* 25.4. [3]Pliny *Letters* 10.96. [4]Lucian *The Passing of Peregrinus* 11. [5]Josephus *Antiquities* 20.9.1. [6]Ibid., 18.3.3. (Emphasis mine.) [7]Ibid., 18.5.2.